ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ತಾವು ಹೇಳಿರುವ ಅಂಶ, ಪ್ರಥಮ ನೋಟಕ್ಕೆ ಸ್ವಲ್ಪ ನಿಜವಿದೆ ಎಂದು ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ಬಂದರೆ, ವಿಚಾರಣೆ ಮಾಡಿಯೇ ಮಾಡುತ್ತಾರೆ. ಮಾನ್ಯ ರಾಮಯ್ಯನವರು ಏನು ಕೆಲಸ ನಿಲ್ಲಿಸಬಾರದು ಎಂದು ಹೇಳುತ್ತಿದ್ದಾರೆ, ಅದು ಯೋಗ್ಯವಾದಂಥ ಮಾತೇ. ಆದರೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ, ನೀರಾವರಿ ಮಂತ್ರಿಗಳೇ ಮಾಡಬೇಕು, ಆದ್ದರಿಂದ ಇದನ್ನು ನಾನು ಅವರ ಗಮನಕ್ಕೆ ತರುತ್ತೇನೆ.

ವಿಷಯ : ಚಿಂತಾಮಣಿಯ ಸೋಮಕನ ಹಳ್ಳಿಯಲ್ಲಿ ನಡೆದ ಘಟನೆ

ಶ್ರೀ ಸಿ. ಭೈರೇಗೌಡ (ಮೇಮಗಲ್):- ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ಚಿಂತಾಮಣಿಯ ಸೋಮಕನಹಳ್ಳಿಯಲ್ಲಿ ನಡೆದ ಘಟನೆ ಬಗ್ಗೆ ಇಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ ಮಾನ್ಯ ಗೃಹಸಚಿವರು ನನ್ನನ್ನು ಕುರಿತು ಕೆಲವು ಮಾತುಗಳನ್ನು ಆಡಿದ್ದಾರೆ. ತಕ್ಷಣ ಅದಕ್ಕೆ ನಾನೂ ಸಹ ಪ್ರತಿಭಟನೆಯನ್ನು ಸೂಚಿಸಿದ್ದೇನೆ. ಮತ್ತೆ ನಮ್ಮ ಸ್ನೇಹಿತರಾದ ಶ್ರೀ ಏಕಾಂತಯ್ಯನವರೂ ಸಹ ಈ ವಿಧಿಬಿಂದುವನ್ನು ಎತ್ತಿ ಆ ರೀತಿ ಮಾನ್ಯ ಗೃಹಸಚಿವರು ನನ್ನಮೇಲೆ ಆಪಾದನೆ ಮಾಡಬೇಕಾಗಿದ್ದರೆ ಮೊದಲೇ ಅದಕ್ಕೆ ಸೂಚನೆಯನ್ನು ಕೊಡಬೇಕು, ತಮ್ಮ ಒಪ್ಪಿಗೆಯನ್ನು ಪಡೆಯ ಬೇಕು, ಅವರು ಏನು ಆರೋಪ ಮಾಡುತ್ತಾರೆ, ಅದರ ಪ್ರತಿಯನ್ನು ನನಗೆ ಕೊಡಬೇಕು ಎಂದು ವಿಧಿವಿಧಾನದಲ್ಲಿರತಕ್ಕಂಥ ಅಂಶವನ್ನು ತಮ್ಮ ಗಮನಕ್ಕೆ ಅವರು ತಂದರು. ತಾವು ಆಗ ಕಡತವನ್ನು ನೋಡಿ, ಅದನ್ನು ತೆಗೆದುಹಾಕುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಇವತ್ತು ಏನಾಗಿದೆ ಎಂದರೆ ಪತ್ರಿಕೆಯಲ್ಲಿ ಈ ವಿಚಾರ ಅಚ್ಚಾಗಿದೆ. ಎರಡು ಪತ್ರಿಕೆಗಳನ್ನು ನಾನು ನೋಡುವುದಕ್ಕೆ ಸಾಧ್ಯವಾಯಿತು. ಉಳಿದ ಯಾವ ಪತ್ರಿಕೆಗಳಲ್ಲಿ ಅದು ಬಂದಿದೆಯೋ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳತಕ್ಕುದ್ದು ಏನೆಂದರೆ ಇದು ನಾಲ್ಕನೆಯ ಸಲ ಈ ಸಭೆಯಲ್ಲಿ ಕುಳಿತುಕೊಳ್ಳತಕ್ಕಂಥ ಅವಕಾಶವನ್ನು ನನ್ನ ಕ್ಷೇತ್ರದ ಜನರು ನನಗೆ ಕಲ್ಪಿಸಿಕೊಟ್ಟಿದ್ದಾರೆ. ಈ ನಾಲ್ಕು ಬಾರಿಯ ಅವಧಿಯಲ್ಲಿ ಒಂದು ಸಣ್ಣ ತಪ್ಪನ್ನೂ ಕೂಡ ಮಾಡುವುದಕ್ಕೆ ಇವತ್ತಿನವರೆಗೆ ಕೂಡ ನಾನು ಪ್ರಯತ್ನ ಮಾಡಿಲ್ಲ. ಅದನ್ನು ಎಲ್ಲಿ ಬೇಕಾದರೂ ನಾನು ಎದೆತಟ್ಟಿ ಧೈರ್ಯವಾಗಿ ಹೇಳಬಲ್ಲೆ. ನನ್ನ ಈ ನಾಲ್ಕು ವರ್ಷಗಳ ಅವಧಿ ಏನಿದೆ, ಇದು ನಮ್ಮ ಜನರಿಗೆ, ರಾಜ್ಯದ ಜನತೆಗೆ, ದೇಶದ ಜನತೆಗೆ ಗೊತ್ತಿದೆ. ಇಂತಹ ಪರಿಸ್ಥಿತಿ ಇರುವಾಗ ಇವತ್ತು ನನ್ನ ಮೇಲೆ ವೃಥಾ ಆರೋಪವನ್ನು ಮಾನ್ಯ ಗೃಹಮಂತ್ರಿಗಳು ಹೊರಿಸಿದ್ದಾರೆ. ಇದರ ಎಲ್ಲಾ ದಾಖಲೆಗಳು ಸರ್ಕಾರದ ಕೈಯಲ್ಲಿದ್ದಾವೆ...

ಶ್ರೀ ಚೌಡರೆಡ್ಡಿ (ಗೃಹಸಚಿವರು) :-ನಾನು ಆರೋಪ ಮಾಡಿರುವುದು ಸತ್ಯ ಎಂದು ಹೇಳಿ ಎಲ್ಲಿಬೇಕಾದರೂ ನಿರೂಪಣೆ ಮಾಡುವುದಕ್ಕೆ ರೆಡಿ ಇದ್ದೇನೆ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಇವರು ನನ್ನಮೇಲೆ ಹೊರಿಸಿರುವ ಆರೋಪ ಏನಿದೆ, ಅದು ಸತ್ಯ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಇದನ್ನು I am challenging this. He must prove it. He is not an ordinary man.

ಶ್ರೀ ಚೌಡರೆಡ್ಡಿ :- ನಾನು ಸಹ ಛಾಲೆಂಜ್ ತೆಗೆದುಕೊಳ್ಳುತ್ತೇನೆ. ಅವತ್ತು ಏನಾಗಿದೆ ಎಂದು ನಾನು ಪ್ರೂವ್‌ಮಾಡುತ್ತೇನೆ.

SRI C. BYRE GOWDA : - He is not an ordinary man. He is holding the administration. He is a man who should enforce the law and order.

ಅಧ್ಯಕ್ಷರು :- ತಾವಿಬ್ಬರೂ ಈ ರೀತಿ ಮಾತನಾಡಿಕೊಳ್ಳುತ್ತಿದ್ದರೆ ಹೇಗೆ? ಮಾನ್ಯ ಸಚಿವರು ಏನಾದರೂ ಅರೋಪ ಮಾಡುವುದಿದ್ದರೆ ನನಗೆ ಬರೆದು ಕಳುಹಿಸಿ ಕೊಡಿ ನಂತರ ನಾನು ಅದನ್ನು ಪರಿಶೀಲನೆಮಾಡಿ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮೊನ್ನೇ ಮಾತನಾಡುವಾಗ ಯಾವುದೋ ಒಂದು ಅಪಾದನೆ ಮಾಡಿ ಮಾತನಾಡಿದ್ದರು. ಬೈರೇಗೌಡರು ಅದಕ್ಕೆ ಉತ್ತರ ಕೊಟ್ಟರು. ನಾನು ಮತ್ತು ಮಾನ್ಯ ಏಕಾಂತಯ್ಯನವರು ಅದನ್ನು ರೈಸ್ ಮಾಡಿದಾಗ ತಾವು ಅದನ್ನು ಎಕ್ಸ್‌ಪಂಜ್ ಮಾಡುತ್ತೇವೆ ಹಾಗೂ ನಾನು ರೆಕಾರ್ಡ್ ನೋಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಏನು ಹೇಳಿದಿರಿ, ಅದು ಏನಾಯಿತು ಎಂದು ನಮಗೆ ಗೊತ್ತಾಗಿಲ್ಲ. ಅದರ ಬಗ್ಗೆ ಹೇಳಿ. ಮಾನ್ಯ ಸಚಿವರು ಪುನ : ನಾನು ಪ್ರೂವ್ ಮಾಡುತ್ತೇನೆ ಎಂದು ಹೇಳುತ್ತಾರೆ. ಅವರು ಮೊದಲು ನೋಟಿಸ್‌ಕೊಡಲಿ ಆಮೇಲೆ ಚಾರ್ಜ್ ಮಾಡಲಿ, ಇಲ್ಲದಿದ್ದರೆ ನಾಳೆ ಪತ್ರಿಕೆಯಲ್ಲಿ ಇದನ್ನೆಲ್ಲಾ ಬರೆಯುತ್ತಾರೆ. ಒಂದು ಪ್ರಾವಿಷನ್ ಇದೆ, ರೂಲ್ಸ್ ಇದೆ, ರೆಗ್ಯುಲೇಷನ್ ಇದೆ. ಒಂದು ಲಿಮಿಟ್ ಇದೆ. ಆ ಪ್ರಕಾರ ಹೋಗಲಿ ಒಂದು ವೇಳೆ ಅವರು ಚಾರ್ಜ್ ಮಾಡಬೇಕಾದರೆ ಅವರ ಮೇಲೆ ಮಾಡಲಿ. ಮನಸ್ಸು ಬಂದ ಹಾಗೆ ಸ್ವೇಚ್ಛೆ ಪ್ರಕಾರ ಚಾರ್ಜ್‌ಮಾಡಿದರೆ ಈ ಪ್ರಕಾರ ಕ್ಯಾರಕ್ಟರ್ ಅಸ್ಯಾಸಿನೇಷನ್ ಮಾಡುತ್ತಾ ಹೋದರೆ ನಾವು ಯಾವ ಮಟ್ಟಕ್ಕೆ ಹೋಗುತ್ತೇವೆ .

ಶ್ರೀ ಸಿ. ಬೈರೇಗೌಡ :- ಅದ್ದರಿಂದ ಮಾನ್ಯ ಅಧ್ಯಕ್ಷರೇ, ಅದನ್ನು ಈಗ ಎಕ್ಸ್‌ಪಂಜ್ ಮಾಡತಕ್ಕಂಥಾದ್ದು ಉಳಿದಿಲ್ಲ. ಈಗ ಅವರೇ ಒಪ್ಪಿಕೊಡಿದ್ದಾರೆ. ಇಲ್ಲಿಯವರೆಗೂ ಅವರು ಗೃಹ ಮಂತ್ರಿಗಳಾಗಿ 5 ತಿಂಗಳಾಯಿತೋ ವರ್ಷ ಆಯಿತೋ ಗೊತ್ತಿಲ್ಲ .

ಅಧ್ಯಕ್ಷರು :- ನಾನು ತರಿಸಿ ನೋಡಿ ಪುನಃ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಈ ರೀತಿ ಹೇಳುವುದು ಸರಿಯಲ್ಲ, ತಮ್ಮ ಮೇಲೆ ಅರೋಪ ಇದ್ದರೆ ಅವರು ನೋಟೀಸ್‌ಕೊಡಲಿ ನಾನು ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ :- ಈಗ ಹೇಳಿರತಕ್ಕಂಥಾದ್ದರ ಬಗ್ಗೆ ಏನು ಹೇಳುತ್ತೀರಿ?

ಅಧ್ಯಕ್ಷರು :- ಈಗ ಹೇಳಿದ್ದು ತಪ್ಪು ಎಂದು ನಾನೇ ಹೇಳುತ್ತೇನೆ.

ಶ್ರೀ ಸಿ.ಬೈರೇಗೌಡ :- ಹಾಗಾದರೆ ಮಾನ್ಯ ಅಧ್ಯಕ್ಷರೇ, ಸ್ವಲ್ಪ ದಯವಿಟ್ಟು ಕೇಳಿ. ಇದೂ ಕೂಡ ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಅವರು ಹೇಳಿರತಕ್ಕಂಥಾದ್ದು ಕೂಡ ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಅವರು ಕಾನೂನಿನ ವಿಧಿ ಮೀರಿ ಮಾತನಾಡುತ್ತಿದ್ದಾರೆ.....

ಅಧ್ಯಕ್ಷರು :- ನಾನು ಕಡತದಿಂದ ತೆಗೆಯುತ್ತೇನೆ. ಅವರು ತಮ್ಮ ಮೇಲೆ ಏನಾದರೂ ಆರೋಪ ಮಾಡಬೇಕಾದರೆ ನೋಟೀಸ್ ಕೊಡಲಿ. ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ :- ನಿನ್ನೆ ಅವರು ಮಾತನಾಡಿದ್ದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು : ನಾವು ಪುನ : ಪತ್ರಿಕೆಯವರನ್ನು ಕರೆಸಿ ಎಕ್ಸ್‌ಪಂಜ್ ಮಾಡಿರುವುದನ್ನು ಹೇಳುತ್ತೇವೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-

1. ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೇ

1978 ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3) ನೇ ಕಲಮಿನ ಮೇರೆಗೆ :

ದಿನಾಂಕ 4-1-1993 ರಂದು ಹೊರಡಿಸಲಾದ ಎಫ್‌ಡಿ 25 ಎಸ್‌ಆರ್‌ಸಿ 91ನೇ ಕ್ರಮಾಂಕದ ಅಧಿಸೂಚನೆ ,

1991 ನೇ ಕರ್ನಾಟಕ ನಾಗರೀಕ ಸೇವೆಗಳ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ) ನಿಯಮಾವಳಿಗಳಿಗೆ ದಿನಾಂಕ 25-8-1992 ರಂದು ಹೊರಡಿಸಲಾದ ಎಫ್‌ಡಿ 25 ಎಸ್‌ಆರ್‌ಪಿ 91ನೇ ಕ್ರಮಾಂಕದ ಅಧಿಸೂಚನೆಗೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

2. ಶ್ರೀ ಚೌಡರೆಡ್ಡಿ (ಗೃಹ ಮಂತ್ರಿ) ಮಾನ್ಯ ಅಧ್ಯಕ್ಷರೇ,

1964 ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

ಬೆಳಗಾಂನ ಮರಾಠಾಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಕೇಂದ್ರದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 27-8-1994 ರಂದು ಹೊರಡಿಸಲಾದ ಹೆಚ್‌ಡಿ 84 ಸಿಎನ್‌ಎ 94ನೇ ಕ್ರಮಾಂಕದ ಆದೇಶವನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಕಾಗದ ಪತ್ರಗಳನ್ನು ಮಂಡಿಸಲಾಯಿತು.